ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶಪಟ್ಟಿ ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ

೨೦೩೧. ಶ್ರೀ ಬಿ. ಡಿ. ಬಸವರಾಜು (ಸಕಲೇಶಪುರ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ೧೯೮೫-೮೬ ರಲ್ಲಿ ಸರ್ಕಾರದ ದೇಯಾಂಶ (ಕೋಟಾ) ದಲ್ಲಿ ಪ್ರವೇಶಪಡೆದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ಸರ್ಕಾರವು ಪ್ರಕಟಣೆ ಹೊರಡಿಸಿದ ದಿನಾಂಕವನ್ನು ಮತ್ತು ಈ ವಿದ್ಯಾರ್ಥಿಗಳ ಪ್ರಥಮ ಎಂ. ಬಿ. ಬಿ. ಎಸ್. ತರಗತಿಗೆ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಸೇರಿದ ದಿನಾಂಕ ತಿಳಿಸಿ.

ಇ) ೧೯೮೫-೮೬ ರಲ್ಲಿ ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ಪ್ರಥಮ ಎಂಬಿಬಿಎಸ್ ತರಗತಿಗಳಿಗೆ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಹೆಸರು ಮತ್ತು ವಿಳಾಸ ತಿಳಿಸಿ.

ಈ) ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜಿನಲ್ಲಿ ೧೯೮೫-೮೬ ರಲ್ಲಿ ಪ್ರವೇಶ ಪಡೆದಿರುವ ಕೆಲವು ವಿದ್ಯಾರ್ಥಿಗಳಿಗೆ ಪ್ರಥಮ ಎಂ.ಬಿ. ಬಿ.ಎಸ್. ಪರೀಕ್ಷೆಗೆ ಹಾಜರಾಗಲು ಪರವಾನಗಿಯನ್ನು ನಿರಾಕರಿಸುವುದು ಸತ್ಯವೆ ?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ಮಂತ್ರಿಗಳು).—

ಅ) ಇಬ್ಬರು.

ಆ) ಮೇಲ್ಕಂಡ ಇಬ್ಬರು ವಿದ್ಯಾರ್ಥಿಗಳ ಪೈಕಿ ಒಬ್ಬರ ಆಯ್ಕೆಯನ್ನು ಸರ್ಕಾರದ ನಿಯಮಿತ ಆಯ್ಕೆ ಸಮಿತಿಯು ದಿನಾಂಕ ೩೦-೯-೧೯೮೫ ರಲ್ಲಿ ಪ್ರಕಟಿಸಿದ್ದು, ಆ ವಿದ್ಯಾರ್ಥಿಯು ದಿನಾಂಕ ೫-೧೦-೧೯೮೫ ರಲ್ಲಿ ಕಾಲೇಜಿಗೆ ಸೇರಿದ್ದಾರೆ. ಇನ್ನೊಬ್ಬ ವಿದ್ಯಾರ್ಥಿಯ ಆಯ್ಕೆಯನ್ನು ೧೬-೧೦-೮೫ ರಲ್ಲಿ ಪ್ರಕಟಿಸಿದ್ದು ಅವರು ದಿನಾಂಕ ೧ ೨೪-೧೦-೧೯೮೬ ರಂದು ಕಾಲೇಜಿಗೆ ಸೇರಿದ್ದಾರೆ.

ಇ) ೧. ಕುಮಾರಿ ಸಂಮಾ ರುದ್ರಪ್ಪ ೧೨೧ ೧೦ನೇ ಮುಖ್ಯ ರಸ್ತೆ, ೬ನೇ ಅಡ್ಡ ರಸ್ತೆ, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು-೫೬೦ ೦೮೦.

೨. ಶ್ರೀ ಹೆಚ್. ಆರ್. ತಿಮ್ಮಯ್ಯ, ದಿ. ಹೆಚ್. ರಂಗಯ್ಯನವರ ಪುತ್ರ, ಕೇಂದ್ರ ಸಿಟ್ರಸ್ ಪ್ರಯೋಗ ಸಂಸ್ಥೆ, ಗೋಣಿ ಕೊಪ್ಪಲ್ ಅಂಚೆ, ದ. ಕೊಡಗು-೫೭೨೧೨೩.

ಈ) ಇಲ್ಲ.

ಚನ್ನಪಟ್ಟಣದಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಪ್ರಾರಂಭಿಸುವ ಬಗ್ಗೆ

೧೮೪೧. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).—ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣದಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ತೆರೆಯುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದರೆ ಯಾವಾಗ ಪ್ರಾರಂಭಿಸಲಾಗುವುದು ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಈ ವಿಷಯವು ಕರ್ನಾಟಕ ಉಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 'ಆ' ನಲ್ಲಿ ಹೇಳಿರುವ ಕಾರಣದಿಂದ ಈ ವಿಷಯವು ಉದ್ಭವಿಸುವುದಿಲ್ಲ.

ಮೈಸೂರು ನಗರಕ್ಕೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಬಗ್ಗೆ

೧೮೨೦. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರಕ್ಕೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸಲು ನಿರ್ಧಾರ ತೆಗೆದು ಕೊಂಡಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ರಚಿಸಲ್ಪಡುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಸರ್ಕಾರವು ಕೆಲವು ನಗರಗಳಿಗೆ ಯೋಜನಾ ಪ್ರಾಧಿಕಾರ ಹಾಗೂ ನಗರಾಭಿವೃದ್ಧಿ ಮಂಡಳಿ ಗಳನ್ನು ಒಂದುಗೂಡಿಸಿ ನಗರ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಆ) ಮೇಲೆ ತಿಳಿಸಿರುವ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ ಶೇರು ಸರ್ಟಿಫಿಕೇಟ್ಸ್‌ಗಳನ್ನು ವಿತರಣೆ ಮಾಡುವ ಬಗ್ಗೆ

೧೭೩೨. ಶ್ರೀ ಜಿ. ಮಾದೇಗೌಡ (ಕಿರುಗಾವಲು).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಚಾಮುಂಡಿ ಶುಗರ್ಸ್ ಲಿಮಿಟೆಡ್, ಕೆ. ಎಮ್. ದೊಡ್ಡಿ, ಮಂಡ್ಯ ಕಾರ್ಖಾನೆಯ ಕಬ್ಬು ಬೆಳೆಗಾರರು ೬೭ ಲಕ್ಷ ರೂ ಶೇರು ಬಂಡವಾಳವನ್ನಾಗಿ ಕಂಪನಿಗೆ ಕೊಟ್ಟಿರುವುದು ನಿಜವೇ ?

ಆ) ಕೇವಲ ೫೭ ಲಕ್ಷ ರೂಪಾಯಿಯಷ್ಟು ಮಾತ್ರ ಶೇರು ಸರ್ಟಿಫಿಕೇಟ್ಸ್‌ಗಳನ್ನು ಕೊಟ್ಟಿರುವುದು ನಿಜವಲ್ಲವೇ ?

ಇ) ಸರ್ಕಾರದವರು ಸಕ್ಕರೆ ನಿರ್ದೇಶಕರ ಮೂಲಕ ಶ್ರೀ ಚಾಮುಂಡಿ ಶುಗರ್ಸ್ ಲಿಮಿಟೆಡ್ ಕೆ. ಎಮ್. ದೊಡ್ಡಿ, ಮಂಡ್ಯರವರ ಆಡಳಿತಕ್ಕೆ ೧೦ ಲಕ್ಷ ರೂ. ಬಾಕಿ ಇರುವ ಶೇರು ಸರ್ಟಿಫಿಕೇಟ್ಸ್ ಗಳನ್ನು ಕೊಡುವಂತೆ ಆದೇಶವನ್ನು ನೀಡಿದ್ದೂನೂ ನಿಜವಲ್ಲವೇ ?

ಈ) ಕಂಪನಿಯು ಆಡಳಿತದ ವಿರುದ್ಧ ಸರ್ಕಾರೀ ಆದೇಶವನ್ನು ಅನುಸರಿಸದೇ ಶೇರು ಸರ್ಟಿಫಿಕೇಟ್ಸ್‌ಗಳನ್ನು ಬಿಡುಗಡೇ ಮಾಡದೇ ಇರುವುದರಿಂದ ತೆಗೆದುಕೊಂಡ ಕ್ರಮಗಳೇನು ?